ಡಿಸೆಂಬರ್ 2023

# ಚಿಣ್ಣರ ಚೇತನ



ದಿ. ಶ್ರೀ ಅನಂತಕುಮಾರ
ಸಂಸ್ಥಾಪಕರು, ಅದಮ್ಯಚೇತನ,
ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು

ಓ ನನ್ನ ಚೇತನ ಆಗು ನೀ ಅನಿಕೇತನ

## ಬಿಲ್ಲು-ಬಾಣಗಳ ಶೀತಲ ದೇವಿ

ಶೀತಲ್ ದೇವಿ ಎಂಬ ಬಿಲ್ಲುಗಾರ್ತಿ ಗೊತ್ತಾ? 16 ವರ್ಷ ಪ್ರಾಯದ ಇವಳಿಗೆ ಹುಟ್ಟಿನಿಂದ ಕೈಗಳೇ ಇಲ್ಲ. ಆದರೆ ಕಾಲಿನಿಂದ ಬಿಲ್ಲನ್ನೆತ್ತಿ, ಬಾಣ ಹೂಡಿ, ಬಿಲ್ಲಿನ ದಾರವನ್ನು ಎದೆಯಿಂದ ಹಿಂದಕ್ಕೆಳೆದು ಬಿಟ್ಟಳೆಂದರೆ ಆ ಬಾಣ ಗುರಿ ತಪ್ಪುವುದೇ ಇಲ್ಲ! ಕಾಶ್ಮೀರದ ರೈತ ಕುಟುಂಬದ ಈ ಹುಡುಗಿ ಏಳನೇ ಕ್ಲಾಸ್‌ನಿಂದಲೇ ಬಿಲ್ಲುವಿದ್ಯೆಯಲ್ಲಿ ಪಳಗುತ್ತ ಅನೇಕ ಅಂತರರಾಷ್ಟ್ರೀಯ ಪ್ರಶಸ್ತಿ ಗಳಿಸಿದ್ದಾಳೆ. ಈ ವರ್ಷ ಚೀನಾದಲ್ಲಿ ನಡೆದ ಏಷ್ಯನ್ ಪ್ಯಾರಾ ಕ್ರೀಡೆಯಲ್ಲಿ ಇವಳಿಗೆ ಒಂದಲ್ಲ, ಎರಡು ಚಿನ್ನದ ಪದಕಗಳು ಸಿಕ್ಕಿವೆ. ಅದರಲ್ಲೂ ವಿಶೇಷ ಏನೆಂದರೆ, ಕೈಗಳಿದ್ದವರ ಜೊತೆ ಪೈಪೋಟಿ ಮಾಡಿ ಈಕೆ ಚಿನ್ನ ಗೆದ್ದಿದ್ದಾಳೆ! ಕುರಿ ಕಾಯುವ ಅವಳ ಅಮ್ಮನಿಗಷ್ಟೇ ಅಲ್ಲ, ಇಡೀ ದೇಶಕ್ಕೇ ಹೆಮ್ಮೆ ತಂದಿದ್ದಾಳೆ.



ಪ್ರತಿವರ್ಷ ಡಿಸೆಂಬರ್ 3ನ್ನು 'ಅಂತರರಾಷ್ಟ್ರೀಯ ವಿಶೇಷ ಚೇತನರ ದಿನ' ಎಂದು ಆಚರಿಸಲಾಗುತ್ತದೆ. ಶರೀರದಲ್ಲಿ ಏನಾದರೂ ನ್ಯೂನತೆ ಇದ್ದವರನ್ನು ನಾವು ಕಡೆಗಣಿಸಬಾರದು. ಹಂಗಿಸಬಾರದು, ಲೇವಡಿ ಮಾಡಬಾರದು. ಅಂಥವರಿಗೆ ಅಕ್ಕಪಕ್ಕದವರ, ಸಮಾಜದ ಗೌರವ ಸಿಗುತ್ತಿದ್ದರೆ ಅವರಲ್ಲೂ ವಿಶ್ವಾಸ ಹೆಚ್ಚುತ್ತದೆ. ತಮ್ಮ ದೌರ್ಬಲ್ಯಗಳನ್ನು ಮರೆತು ವಿಶೇಷ ಸಾಮರ್ಥ್ಯ ತೋರುತ್ತಾರೆ.

1984ರ ಡಿಸೆಂಬರ್ 3ರಂದು ಭೋಪಾಲದ ಒಂದು ಕಾರ್ಖಾನೆಯಲ್ಲಿ ವಿಷಾನಿಲ ಸೋರಿಕೆಯಾಗಿ ಹತ್ತಾರು ಸಾವಿರ ಜನರು ಪ್ರಾಣಬಿಟ್ಟರು. ಅದು ಜಗತ್ತಿನ ಅತಿ ದೊಡ್ಡ ಔದ್ಯಮಿಕ ದುರಂತ ಎನಿಸಿತು. ವಿಷಾನಿಲ ಸೇವಿಸಿದ ಗರ್ಭಿಣಿ ಮಹಿಳೆಯರಿಗೆ ವಿಕಲಾಂಗ ಮಕ್ಕಳು ಜನಿಸಿದರು. ಅಂಥ ಯಾವುದೇ ದುರಂತ ಆಗಿರದಿದ್ದ ಊರಲ್ಲೂ ಅಲ್ಲೊಂದು ಇಲ್ಲೊಂದು ಅಂಥ ಊನ ಅಂಗಗಳ ಮಕ್ಕಳು ಜನಿಸುವುದುಂಟು. ಅವರೂ ಎಲ್ಲರಂತೆ ನೆಮ್ಮದಿ ಜೀವನ ನಡೆಸಬೇಕು, ನಾವು ಸಹಕರಿಸಬೇಕು ಎಂತಲೇ ಅಂದು ಜಗತ್ತಿನೆಲ್ಲೆಡೆ 'ವಿಶೇಷ ಚೇತನರ ದಿನ' ಎಂದು ಆಚರಿಸಲಾಗುತ್ತದೆ.

## ಸೋಜಿಗದ ಕ್ಷುದ್ರಗ್ರಹ 'ಡಿಂಕಿನೇಶ್'



'ಡಿಂಕಿನೇಶ್' ಎಂದರೆ ಇಥಿಯೋಪಿಯನ್ ಭಾಷೆಯಲ್ಲಿ 'ಅದ್ಭುತ', 'ವಿಸ್ಮಯ', 'ನಂಬಲಸಾಧ್ಯ' (ಇಂಗ್ಲಿಷ್‌ನಲ್ಲಿ 'ಮಾರ್ವೆಲಸ್') ಎಂಬ ಅರ್ಥವಿದೆ. ಅದರ ಬಗ್ಗೆ ಒಂದು ಸೋಜಿಗದ ಸಂಗತಿ ಇಲ್ಲಿದೆ ನೋಡಿ:

ಸೌರ ಮಂಡಲದಲ್ಲಿ ಮಂಗಳ ಮತ್ತು ಗುರು ಗ್ರಹಗಳ ಮಧ್ಯೆ ಅನೇಕ ಸಾವಿರ ಕ್ಷುದ್ರಗ್ರಹಗಳು ಸುತ್ತು ಹಾಕುತ್ತಿವೆ. 1999ರಲ್ಲಿ ನಾಸಾ ವಿಜ್ಞಾನಿಗಳು ದೂರದರ್ಶಕದಿಂದ ಅವುಗಳನ್ನು ಗುರುತಿಸುತ್ತ ಒಂದಕ್ಕೆ 'ಡಿಂಕಿನೇಶ್' ಎಂದು ಹೆಸರು ಕೊಟ್ಟರು. ಅದು ಆಲೂಗಡ್ಡೆಯಂಥ, ಬರೀ 790 ಮೀಟರ್ ವ್ಯಾಸದ ಒಂದು ಬಂಡೆ. ಈಚೆಗೆ ನಾಸಾದವರು ಹಾರಿಬಿಟ್ಟ 'ಲೂಸಿ' ಹೆಸರಿನ ಶೋಧಯಂತ್ರವೊಂದು ಗುರುಗ್ರಹದತ್ತ ಸಾಗುತ್ತಿದ್ದಾಗ, ಡಿಂಕಿನೇಶ್ ಕಡೆ ತುಸು ಲಕ್ಷ್ಯ ಕೊಟ್ಟು ನೋಡಿತು. ಅಚ್ಚರಿ ಏನೆಂದರೆ ಅದಕ್ಕೆ ಅಂಟಿಕೊಂಡು ಇನ್ನೊಂದು ಪುಟ್ಟ, 220 ಮೀಟರ್ ವ್ಯಾಸದ ಮರಿಬಂಡೆಯೂ ಇದೆ! ಇನ್ನೊಂದು ಸೋಜಿಗ ಏನೆಂದರೆ ಅದು ತನ್ನ ಅಮ್ಮ ಡಿಂಕಿನೇಶ್‌ದ ಮೈ ಸವರುತ್ತ ಸುತ್ತು ಹಾಕ್ತಾ ಇದೆ. ನಮ್ಮ ಚಂದಮಾಮ ಭೂಮಿಯನ್ನು ಸುತ್ತುವ ಹಾಗೆ ದೂರದಿಂದಲ್ಲ, ಅಂಟಂಟಿಕೊಂಡೇ! ನಮ್ಮ ಚಂದ್ರ ಹಾಗೇನಾದರೂ ಭೂಮಿಗೆ ತಾಗಿಕೊಂಡೇ ಸುತ್ತುತ್ತಿದ್ದರೆ ಏನೇನಾಗುತ್ತಿತ್ತು ಊಹಿಸಿ!

ನಮ್ಮಿಂದ 48 ಕೋಟಿ ಕಿಲೊಮೀಟರ್ ದೂರದ ಈ ಡಿಂಕಿನೇಶ್ ಜೋಡಿ ಕ್ಷುದ್ರಗ್ರಹದ ಚಿತ್ರವನ್ನು ಕಳೆದ ನವೆಂಬರ್ 7ರಂದು 'ಲೂಸಿ' ನೌಕೆ ಭೂಮಿಗೆ ರವಾನಿಸಿದೆ.

## ಪಕ್ಷಿಗಳಿಗೆ ನೀರುಣಿಸುವ ಹೂಮರ



ನಗರದ ಬೀದಿಯ ಬದಿಗಳಲ್ಲಿ ಬಣ್ಣದ ತೇರಿನಂತೆ ಕಡುಗೆಂಪು ಹೂಗಳನ್ನು ಧರಿಸಿ ನಿಂತ ಈ ದೊಡ್ಡ ಮರಗಳನ್ನು ನೀವು ನೋಡಿರಬಹುದು. ಚಳಿಗಾಲ ಬಂತೆಂದರೆ ಇದು ಕೆಂಪು ಹಳದಿಯ ಕಂಬಳಿಯನ್ನೇ ಹೊದೆದಂತೆ ಸುಂದರವಾಗಿ ಮೈತುಂಬಿ ನಿಂತಿರುತ್ತದೆ.

ಆಫ್ರಿಕಾ ಖಂಡದಿಂದ ನಮ್ಮ ನಗರಗಳಿಗೆ ಬಂದಿರುವ ಈ ವೃಕ್ಷಕ್ಕೆ ಕನ್ನಡದಲ್ಲಿ 'ಗುಡ್ಡೆಕಾಯಿ ಮರ' ಎನ್ನುತ್ತೇವೆ. ತುಂಟ ಹುಡುಗರು ಇದಕ್ಕೆ 'ಉಚ್ಚೆಕಾಯಿ ಮರ' ಎನ್ನುತ್ತಾರೆ ಏಕೆಂದರೆ ಇದರ ಪುಷ್ಪಪಾತ್ರೆಯನ್ನು ಹಿಸುಕಿದರೆ ಚುಳ್ಳೆಂದು ನೀರು ಜಿನುಗುತ್ತದೆ. ಕೆಲವೊಮ್ಮೆ ತನ್ನ ಬಣ್ಣವನ್ನೂ ಚಿಮ್ಮಿಸುತ್ತದೆ. ಗ್ರಾಮೀಣ ಪರಿಸರದಲ್ಲಿ ಇದು ನಮ್ಮಲ್ಲಿ ಸಹಜವಾಗಿ ಬೆಳೆದಿದ್ದಿಲ್ಲ, ಹಾಗಾಗಿ ಗ್ರಾಮ್ಯ ಭಾಷೆಯಲ್ಲಿ ಇದಕ್ಕೆ ದೇಸೀ ಹೆಸರಿಲ್ಲ. ಇಂಗ್ಲಿಷಿನಲ್ಲಿ ಇದಕ್ಕೆ 'ಆಫ್ರಿಕನ್ ಟ್ಯೂಲಿಪ್' ಎನ್ನುತ್ತಾರೆ. ಸಸ್ಯವಿಜ್ಞಾನದಲ್ಲಿ ಇದು ಸ್ಪೆಥೊಡಿಯಾ ಕಂಪನುಲಾಟಾ (Spathodea campanulata). ವರ್ಷವಿಡೀ ಈ ವೃಕ್ಷದಲ್ಲಿ ಅಲ್ಲಲ್ಲಿ ಹೂಗಳು ಕಾಣುತ್ತವಾದರೂ ಚಳಿಗಾಲ ಬಂದಾಗ ಇದಕ್ಕೆ ಮೈತುಂಬ ಹೂವು.

ಮಳೆ ಬೀಳದಿದ್ದರೂ ಇದರೊಳಕ್ಕೆ ನೀರು ಹೇಗೆ ತುಂಬಿಕೊಂಡಿತು? ಅದು ಸೋಜಿಗದ ಸಂಗತಿ. ಗಾಳಿಯಲ್ಲಿನ ನೀರಾವಿಯನ್ನೇ ಸಂಗ್ರಹಿಸುವ ತಂತ್ರ ಈ ಮರಕ್ಕೆ ಗೊತ್ತಿದೆ. ಹಕ್ಕಿ ಪಕ್ಷಿಗಳು, ಚಿಕ್ಕದೊಡ್ಡ ಕೀಟಗಳು ಈ ನೀರನ್ನು ಕುಡಿಯಲೆಂದೇ ಹೂಗಳ ಬಳಿ ಬರುತ್ತವೆ. ಕೀಟಗಳನ್ನು ಆಕರ್ಷಿಸಿ ಪರಾಗಸ್ಪರ್ಶ ಮಾಡಿಸಲೆಂದು ಮಧು ಮತ್ತು ಮಕರಂದವನ್ನು ಸೃಷ್ಟಿಸಿಕೊಳ್ಳುವ ಹೂಗಳು ನಮಗೆ ಗೊತ್ತಿವೆ. ಬಾಯಾರಿದ ಜೀವಿಗಳಿಗೆ ಬರೀ ನೀರು ಕೂಡ ಆಕರ್ಷಕ ಎನ್ನಿಸುತ್ತದೆ.

ನಮ್ಮ ಸುತ್ತ ಇರುವ ಇಂಥ ಉಪಕಾರಿ ವೃಕ್ಷಗಳ ಬಗ್ಗೆ ನಮಗೆ ಗೊತ್ತಿರಬೇಕು. ಈ ಮರದ ಬೀಜ ಪ್ರಸಾರ ಹೇಗೆ ಎಂಬುದನ್ನು ನೀವೇ ಕಂಡುಕೊಳ್ಳುವಿರಿ ತಾನೆ?

## ಸುಭಾಷಿತ

वृक्षो रक्षति रक्षितः, सृष्टिरेषा वनेचराः।
प्राणिनो यस्य दुर्बुद्धिः, स सर्वप्राणभक्षणः।।

ವೃಕ್ಷೋ ರಕ್ಷತಿ ರಕ್ಷಿತಃ, ಸೃಷ್ಟಿರೇಶಾ ವನೇಚರಃ।
ಪ್ರಾಣಿನೋ ಯಸ್ಯ ದುರ್ಬುದ್ಧಿಃ, ಸ ಸರ್ವಪ್ರಾಣಭಕ್ಷಣಃ ।।

ಮರಗಳು ತಮ್ಮನ್ನು ರಕ್ಷಿಸುವವರನ್ನು ರಕ್ಷಿಸುತ್ತವೆ;
ಕಾಡುಗಳಿಗೆ ಹಾನಿ ಮಾಡುವವರಿಗೆ ಬುದ್ಧಿವಂತಿಕೆಯ ಕೊರತೆಯಿದೆ ಮತ್ತು ಅವರು ಜೀವ ಶಕ್ತಿಯನ್ನೇ ನಾಶಪಡಿಸುತ್ತಾರೆ.

## ಗುಡ್ಡ ಬೆಟ್ಟಗಳನ್ನು ನೀವೆಂದಾದರೂ ಹತ್ತಿದ್ದೀರಾ?

11 December
International MOUNTAIN DAY

'ದೇವಭೂಮಿ' ಎಂದೇ ನಾವು ಪರಿಗಣಿಸುವ ಹಿಮಾಲಯದ ಮೇಲೂ ತಿಪ್ಪೆ ರಾಶಿಗಳನ್ನು ಪ್ರವಾಸಿಗರು ಸೃಷ್ಟಿ ಮಾಡಿದ್ದಾರೆ ನೀವು ಓದಿರಬಹುದು. ಜಗತ್ತಿನ ಬಹಳಷ್ಟು ದೇಶಗಳಲ್ಲಿ ಪರ್ವತಗಳಿಗೆ ಸಂಕಟ ಬರುತ್ತಿದೆ. ಅದು ನಮಗೆಲ್ಲ ಗೊತ್ತಿರಲೆಂದೇ ಪ್ರತಿ ವರ್ಷ ಡಿಸೆಂಬರ್ 11ನ್ನು 'ವಿಶ್ವ ಪರ್ವತ ದಿನ' ಎಂದು ವಿಶೇಷವಾಗಿ ಶಾಲೆ ಕಾಲೇಜುಗಳಲ್ಲಿ ಆಚರಿಸುತ್ತಾರೆ. ಪರ್ವತಕ್ಕೆ ಅಷ್ಟೇಕೆ ಮಹತ್ವ ಗೊತ್ತೆ? ಜಗತ್ತಿನ ಎಲ್ಲ ನದಿಗಳೂ ಪರ್ವತಗಳಲ್ಲೇ ಉಗಮ ಆಗುತ್ತವೆ. ಅಪರೂಪದ ದಟ್ಟ ಕಾಡು, ಔಷಧ ಮೂಲಿಕೆಗಳೆಲ್ಲ ಎತ್ತರದ ಗುಡ್ಡಬೆಟ್ಟಗಳಲ್ಲೇ ಇವೆ. ಅಲ್ಲಿ ಅಪರೂಪದ ಜೀವಲೋಕ ಇರುತ್ತವೆ. ಅಲ್ಲಿ ತಿಪ್ಪೆ ಸುರಿಯುವ, ಡೈನಮೈಟ್ ಸಿಡಿಸಿ ಗಣಿಗಾರಿಕೆ ಮಾಡುವ, ಪ್ರಾಣಿಗಳ ಬೇಟೆಯಾಡುವ ಕೆಟ್ಟ ಕೆಲಸಗಳಿಗೆಲ್ಲ ತಡೆ ಹಾಕಬೇಕು.

ನೀವು ಆ ದಿನ ನಿಮ್ಮ ಶಾಲೆಯಲ್ಲಿ ಗುಡ್ಡ-ಬೆಟ್ಟ, ಪರ್ವತಗಳ ಚಿತ್ರ, ಪ್ರಬಂಧ ಬರೆಯಬಹುದು ಅಥವಾ ಸಂಗ್ರಹಿಸಬಹುದು. ಕವಿತೆ ಓದಬಹುದು. ಹನುಮಂತನ ಕತೆ ಹೇಳಬಹುದು. ಸಾಧ್ಯವಿದ್ದರೆ ಸಮೀಪದ ಬೆಟ್ಟಕ್ಕೆ ಪ್ರವಾಸ ಹೋಗಿ ಅಲ್ಲಿನ ವಿಶೇಷಗಳನ್ನು ನೋಡಿ ಬರಬಹುದು. ಎಷ್ಟೊಂದು ಚಟುವಟಿಕೆ ಸಾಧ್ಯವಿದೆ ಅಲ್ಲವೆ? ಇನ್ನೇನೇನನ್ನು ಮಾಡಬಹುದು?

## ಮಾಂತ್ರಿಕ ಶಕ್ತಿಯ 'ಮಾಯಾಚೌಕ'

| | | |
|---|---|---|
| 8 | 1 | 6 |
| 3 | 5 | 7 |
| 4 | 9 | 2 |

ಮಾಯಾಚೌಕ ಎಂದರೆ ಏನೆಂಬುದು ನಿಮಗೆ ಗೊತ್ತಿರಬಹುದು. ಇಲ್ಲೊಂದು ಉದಾಹರಣೆ ಇದೆ ನೋಡಿ. ಇದರ ಅಡ್ಡ ಸಾಲುಗಳ ಅಂಕಿಗಳನ್ನೆಲ್ಲ ಕೂಡಿಸಿದರೆ 15 ಬರುತ್ತದೆ. ಕಂಬಸಾಲುಗಳ ಅಂಕಿಗಳನ್ನು ಕೂಡಿಸಿದರೂ 15 ಬರುತ್ತದೆ. ಈ ಮೂಲೆಯಿಂದ ಆ ಮೂಲೆ (ಕರ್ಣ)ಗಳ ಅಂಕಿಗಳ ಮೊತ್ತವೂ ಅದೇ 15 ಆಗಿರುತ್ತದೆ. ಎಲ್ಲ ಸಂಖ್ಯೆಗಳೂ ಒಂದೊಂದೇ ಬಾರಿ ಬಂದಿವೆ. ಇದೇ ಮಾದರಿಯಲ್ಲಿ ಬೇರೆ ಬೇರೆ ಮೂರಂಕಿಗಳ ಮಾಯಾಚೌಕಗಳನ್ನು ನೀವೂ ರಚಿಸಬಹುದು. ತುಸು ಶ್ರಮಿಸಿದರೆ ನಾಲ್ಕು ಅಂಕಿಗಳ ನಾಲ್ಕು ಸಾಲುಗಳ ಮಾಯಾಚೌಕವನ್ನು, ಅಷ್ಟೇಕೆ ಐದು, ಆರು, ಹೀಗೆ ಎಷ್ಟು ಬೇಕಾದರೂ ಸಂಖ್ಯಾಸಾಲು, ಕಂಬ ಸಾಲುಗಳ ಮ್ಯಾಜಿಕ್ ಸ್ಕ್ವೇರ್ (ಅಂ-ದರೆ ಮಾಯಾ ಚೌಕ)ಗಳನ್ನು ರಚಿಸಲು ಸಾಧ್ಯವಿದೆ.

ಭಾರತದ ಅಪ್ರತಿಮ ಗಣಿತಜ್ಞ ಶ್ರೀನಿವಾಸ ರಾಮಾನುಜನ್ (ಜನನ 1887) ಬಾಲಕ ಆಗಿದ್ದಾಗ ಮಾಯಾಚೌಕಗಳನ್ನು ಸೃಷ್ಟಿಸುತ್ತಿದ್ದರು. ಅಲ್ಲಿಂದ ಆರಂಭವಾದ ಅವರ ಗಣಿತ ಪ್ರತಿಭೆ ಪ್ರಖರವಾಗಿ ಅರಳುತ್ತ ಹೋಯಿತು. ಪದವಿ ಪಡೆಯದಿದ್ದರೂ ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದ ಗಣಿತ ಪಂಡಿತರು ಈ ಯುವಕನನ್ನು ಮದ್ರಾಸಿನಿಂದ ಕರೆಸಿಕೊಂಡು ಹೆಚ್ಚಿನ ಅಧ್ಯಯನಕ್ಕೆ ನೆರವು ನೀಡಿದರು. ಮುಂದೆ ನಾಲ್ಕೇ ವರ್ಷಗಳಲ್ಲಿ ಜಗತ್ತಿನ ಸರ್ವಶ್ರೇಷ್ಠ ಗಣಿತಜ್ಞರ ಸಾಲಿಗೆ ಅವರು ಸೇರಿದರು. ಕಾಯಿಲೆಯಿಂದ ತಾಯ್ನಾಡಿಗೆ ಹಿಂದಿರುಗಿದ ರಾಮಾನುಜನ್ ದುರದೃಷ್ಟವಶಾತ್ 32ನೇ ವಯಸ್ಸಿನಲ್ಲೇ ನಿಧನರಾದರು.

ಶ್ರೀ. ರಾಮಾನುಜನ್ ಅವರ ಜನ್ಮದಿನ ಡಿಸೆಂಬರ್ 22ನ್ನು ನಮ್ಮ ದೇಶದ 'ರಾಷ್ಟ್ರೀಯ ಗಣಿತ ದಿನ' ಎಂದು ಆಚರಿಸುತ್ತೇವೆ.



## ಪಾಪದ ಪ್ರಾಣಿ ಪ್ಯಾಂಗೊಲಿನ್



ಹುಲಿ ಉಗುರಿನ ತಾಯಿತ ಕಟ್ಟಿಕೊಂಡರೆ ಅಂಥವರನ್ನು ಹಿಡಿದು ಲಾಕಪ್ಪಿಗೆ ಹಾಕುತ್ತಾರೆ, ಏಕೆ ಹೇಳಿ? ವನ್ಯ ಜೀವಿಗಳ ಯಾವುದೇ ಬಿಡಿಭಾಗವನ್ನು ಬಳಸಬಾರದೆಂಬ ಕಾನೂನು ಇದೆ.

ಪಾಪ, ಈ ಇರುವೆಭಕ್ಷಕ (ಪ್ಯಾಂಗೊಲಿನ್) ಎಂಬ ಚಿಪ್ಪುಹಂದಿಯ ದುರದೃಷ್ಟ ನೋಡಿ: ಇದು ಯಾರಿಗೂ ತೊಂದರೆ ಕೊಡುವುದಿಲ್ಲ. ರಾತ್ರಿವೇಳೆಗೆ ಗೆದ್ದಲು ಹುತ್ತ, ಇರುವೆ ಗೂಡಿನ ಬಳಿ ಈ ಸ್ತನಿ ಜೀವಿ ಬರುತ್ತದೆ. ತನ್ನ ದೇಹದಷ್ಟೇ ಉದ್ದದ ನಾಲಿಗೆಯನ್ನು ಹೊರಕ್ಕೆ ಚಾಚಿ, ಗೂಡಿನೊಳಕ್ಕೆ ತೂರಿಸಿ, ಅವುಗಳನ್ನು ಸೆಳೆದು ನುಂಗುತ್ತಿರುತ್ತದೆ. ಮರಿಗಳಿದ್ದರೆ ಬಾಲದ ಮೇಲೆ ಅವನ್ನು ಕೂರಿಸಿ ಕೊಂಡು ಪೊದೆಗಳಲ್ಲಿ ಅಡ್ಡಾಡುತ್ತದೆ. ಹುಲಿ, ಚಿರತೆಗಳು ಇದನ್ನು ಬೇಟೆಯಾಡಲು ಬಂದರೆ ಇದು ಚಂಡಿನಂತೆ ಮುದ್ದೆಯಾಗಿ ಮಲಗುತ್ತದೆ. ಇದರ ಚಿಪ್ಪನ್ನು ಭೇದಿಸಲು ಅವಕ್ಕೆ ಸಾಧ್ಯವಿಲ್ಲ. ಜಾಸ್ತಿ ತಿವಿಯಲು ಯತ್ನಿಸಿದರೆ ಘೋರ ದುರ್ವಾಸನೆಯ ಘಾಟು ಮೂತ್ರವನ್ನು ಚಿಮ್ಮಿಸುತ್ತದೆ. ದಾಳಿಗೆ ಬಂದ ಯಾರಾದರೂ ಓಡಲೇಬೇಕು! ನಿಸರ್ಗ ಇದಕ್ಕೆ ಅಷ್ಟೆಲ್ಲ ರಕ್ಷಣೆ ಕೊಟ್ಟಿದೆ. ಆದರೆ ಹಾರೆ, ಕಠಾರಿ ಹಿಡಿದ ಮನುಷ್ಯ ಇದನ್ನು ಕೊಂದು ಚಿಪ್ಪನ್ನು ಕಿತ್ತು ಮಾರುತ್ತಾನೆ. ಚಿಪ್ಪನ್ನು ತೇಯ್ದು ನೆಕ್ಕಿದರೆ ಏನೆಲ್ಲ ಕಾಯಿಲೆ ವಾಸಿ ಆಗುತ್ತದೆ ಎಂಬ ಮೂಢ ನಂಬಿಕೆ ಚೀನೀಯರಲ್ಲಿದೆ. "ಯಾವ ವಿಶೇಷ ಔಷಧೀಯ ಗುಣವೂ ಚಿಪ್ಪಿನಲ್ಲಿ ಇಲ್ಲ: ನಮ್ಮ ಉಗುರು, ಕೂದಲಿನಲ್ಲಿರುವ ಕೆರಾಟಿನ್ ಅಂಶವೇ ಇದರಲ್ಲೂ ಇದೆ, ಘೇಂಡಾ ಮೃಗದ ಕೊಂಬಿನಲ್ಲೂ ಇದೆ" ಎಂದು ವಿಜ್ಞಾನಿಗಳು ಎಷ್ಟೊಂದು ಬಾರಿ ಹೇಳಿದರೂ ವ್ಯರ್ಥವಾಗಿದೆ. ಅತ್ಯಂತ ಶೀಘ್ರ ನಿರ್ವಂಶವಾಗಲಿರುವ ಸ್ತನಿಗಳಲ್ಲಿ ಪ್ಯಾಂಗೊಲಿನ್ ಮುಂಚೂಣಿಯಲ್ಲಿದೆ ಎಂದು ಹೇಳಲಾಗುತ್ತಿದೆ.

"ದೇವರು ಈ ಜೀವಿಗಳನ್ನು ವೈರಿಗಳಿಂದ, ರೋಗರುಜಿನೆಗಳಿಂದ, ನಿಸರ್ಗ ಪ್ರಕೋಪಗಳಿಂದ ಪಾರು ಮಾಡಿದ. ಆದರೆ ಮೂರ್ಖ-ರಿಂದ ಬಚಾವು ಮಾಡಲಾರನಲ್ಲ!" ಎಂದು ಅಮೆರಿಕದ ನಿಸರ್ಗ ಸಂರಕ್ಷಕ ಜಾನ್ ಮುಯಿರ್ ಎಂಬಾತ ಹೇಳಿದ್ದು ಈ ಸಂದರ್ಭಕ್ಕೆ ಸರಿಯಾಗಿ ಹೊಂದುತ್ತದೆ.

## ಕಣ್ಣಿಗೆ ಕಂಡಿದ್ದು ಸುಳ್ಳಾಗಬಹುದು

"ಪ್ರತ್ಯಕ್ಷ ಕಂಡರೂ ಪರಾಮರ್ಶಿಸಿ ನೋಡಬೇಕು" ಎಂಬ ಮಾತನ್ನು ಕೇಳಿದ್ದೀರಾ? ಕಣ್ಣಿಗೆ ಕಂಡಿದ್ದೆಲ್ಲವೂ ಸತ್ಯ ಇರಲಿಕ್ಕಿಲ್ಲ ಎಂಬುದು ಅದರ ಅರ್ಥ. ಇಲ್ಲಿ ಕೊಟ್ಟ ಚಿತ್ರವನ್ನೇ ನೋಡಿ: ಒಂದು ಅಡ್ಡಪಟ್ಟಿಯ ಮೇಲೆ ಇನ್ನೊಂದು ನೇರ ಪಟ್ಟಿ ಇದೆ. ನೇರ ನಿಂತ ಪಟ್ಟಿಯೇ ಹೆಚ್ಚು ಉದ್ದ ಇರುವಂತೆ ಕಾಣುತ್ತದೆ ತಾನೆ? ಬೇಕಿದ್ದರೆ ಅಳೆದು ನೋಡಿ. ಎರಡೂ ಪಟ್ಟಿಗಳ ಉದ್ದ ಅಷ್ಟಷ್ಟೇ



## ರಸಪ್ರಶ್ನೆ:



ಗಣಿತದ ತಪ್ಪು ಲೆಕ್ಕವೊಂದು ಇಲ್ಲಿದೆ ನೋಡಿ. ೧೮ ಬೆಂಕಿಕಡ್ಡಿಗಳಿಂದ ರಚಿಸಿದ ಲೆಕ್ಕಾಚಾರ ಇದು. ನಿಮಗೊಂದು ಸರಳ ಪ್ರಶ್ನೆ ಏನೆಂದರೆ- ಒಂದು ಕಡ್ಡಿಯನ್ನು ಮಾತ್ರ ಸ್ಥಾನಪಲ್ಲಟ ಮಾಡಿ ಈ ಲೆಕ್ಕವನ್ನು ಸರಿ ಮಾಡಬೇಕು. ಮಾಡಬಲ್ಲಿರಿ ತಾನೆ? (ಇದನ್ನು ಮೂರು ವಿಭಿನ್ನ ರೀತಿಗಳಲ್ಲಿ ಮಾಡಬಹುದು). ಯತ್ನಿಸಿ.

ಕಳೆದ ನವಂಬರ್ ಸಂಚಿಕೆಯ ರಸಪ್ರಶ್ನೆ ನೆನಪಿದೆಯೆ? ಒಂದು ಜೋಳದ ಹೊಲಕ್ಕೆ ಕೆಲವು ಗಿಳಿಗಳು ಬಂದವು. ಒಂದೊಂದು ತೆನೆಯ ಮೇಲೆ ಒಂದೊಂದು ಗಿಳಿ ಕೂತಿತು. ಪಾಪ ಒಂದು ಗಿಳಿಗೆ ತೆನೆಯೇ ಉಳಿಯಲಿಲ್ಲ. ಅದಕ್ಕೆ ಅನ್ಯಾಯವಾಯಿತೆಂದು ಒಂದೊಂದು ತೆನೆಯ ಮೇಲೆ ಎರಡೆರಡು ಗಿಳಿಗಳು ಕೂತವು. ಆಗ ಒಂದು ತೆನೆಗೆ ಗಿಳಿಗಳೇ ಇರಲಿಲ್ಲ. ಹಾಗಿದ್ದರೆ ಎಷ್ಟು ಗಿಳಿಗಳಿದ್ದವು, ಎಷ್ಟು ತೆನೆ ಇದ್ದವು?

ಉತ್ತರ: ನಾಲ್ಕು ಗಿಳಿ, ಮೂರು ತೆನೆ.


ಅದಮ್ಯ ಚೇತನ

BBMP ಸಮುದಾಯ ಭವನ, ಗವಿಪುರ, ಬೆಂಗಳೂರು 560019

ಅದಮ್ಯ ಚೇತನ
Adamya Chetana

ಅದಮ್ಯಚೇತನದಿಂದ ಶಾಲಾ ಮಕ್ಕಳಿಗಾಗಿ ಪ್ರಕಾಶಿತ 'ಚಿಣ್ಣರ ಚೇತನ' ಗೋಡೆಪತ್ರಿಕೆ


© ಎಲ್ಲ ಹಕ್ಕುಗಳು ಅದಮ್ಯಚೇತನಕ್ಕೆ ಸೇರಿವೆ


ಸಂಪಾದಕರು: ನಾಗೇಶ ಹೆಗಡೆ ವಿನ್ಯಾಸ: ಶ್ರೀಪಾದ
ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು
https://adamyachetana.org/
ಪ್ರಕಾಶಕರು: ತೇಜಸ್ವಿನಿ ಅನಂತಕುಮಾರ, ಅದಮ್ಯ ಚೇತನ

ಸಹಯೋಗ:
ಅನಂತಕುಮಾರ ಪ್ರತಿಷ್ಠಾನ
12, ಸುಮೇರು, ಎಮ್ ಎನ್ ಕೃಷ್ಣರಾವ್ ರಸ್ತೆ,
ಬಸವನಗುಡಿ,
ಬೆಂಗಳೂರು 560004
https://akp.org.in/